ಶ್ರೀ ಎಚ್. ಡಿ. ದೇವೇಗೌಡ.—ನಾವು ಅಲ್ಲಿ ಕುಳಿತು ಉತ್ತರಕ್ಕಾಗಿ ೧ ವರ್ಷ ಕಾದಿದ್ದೇವೆ. ಸ್ವಲ್ಪ ಸಮಯ ತಡೆದುಕೊಳ್ಳಿ ಉತ್ತರದ ಪಟ್ಟಿ ಒದಗಿಸಲಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಪ್ರಶ್ನೆಗಳಿಗೆ ೫ ವರ್ಷಗಳವರೆಗೂ ಉತ್ತರ ಬರಲೇ ಇಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಇವತ್ತಿನ ರೂಲ್ಸ್ ಪ್ರಕಾರ ಆವತ್ತು ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಪ್ರಶ್ನೆಗಳಿಗೆ ೧೫ ದಿವಸಗಳಲ್ಲಿ ಉತ್ತರ ಒದಗಿಸಿ ಕೊಟ್ಟಿದ್ದೇವೆ. ತಮಗೆ ಉತ್ತರದ ಕಾಪಿಗಳನ್ನು ಕಳುಹಿಸಿ ಕೊಟ್ಟಿದ್ದೇವೆ. ನಮ್ಮ ಪ್ರಶ್ನೆಗಳಿಗೆ ಅಲ್ಲಿದ್ದಾಗ ಮೂರು ವರ್ಷಗಳಾದರೂ ಉತ್ತರ ಬಂದಿಲ್ಲ. ಈಗ ಆ ಕಾಲ ಹೋಯಿತು. ನಾನು ಉತ್ತರ ಕೊಡಲಿಕ್ಕೆ ತಯಾರಾಗಿದ್ದೇನೆ. ಉತ್ತರದ ಕಾಪಿಗಳನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹೊಸ ನಿಯಾಮಾವಳಿಗಳ ಪ್ರಕಾರ ನಡೆದುಕೊಳ್ಳುವುದು ನಿಮ್ಮ ಆಧ್ಯಕರ್ತವ್ಯ. ನೀವು ನಮಗೆ ಉತ್ತರವನ್ನು ಕೊಡಬೇಕು.

MR. DEPUTY SPEAKER.—I am always protecting the interests of the members. He is answering. You may ask further questions.

ಶ್ರೀ ಗೋವಿಂದ ಪಿ. ಒಡೆಯರಾಜ್.— ಈಗ ಉತ್ತರದ ಪ್ರತಿಗಳನ್ನು ಕೊಡುತ್ತಿದ್ದಾರೆ. ಸರ್ಕಾರದ ಅಧಿಕಾರಿಗಳು ಈ ರೀತಿ ನಡೆದುಕೊಂಡರೆ ಹೇಗೆ ಅದಕ್ಕೋಸ್ಕರ ನನ್ನ ಪ್ರತಿಭಟನೆಯನ್ನು ವ್ಯಕ್ತ ಮಾಡುತ್ತಿದ್ದೇನೆ.

ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಸರ್ಕಾರದ ನೀತಿ.

೩೫. ಶ್ರೀ ಜೆ. ಪಿ. ಒಡೆಯರಾಜ್ (ಕಮಲಾಪುರ).— ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೆ?

ಅ) ರಾಜ್ಯದ ಕೈಗಾರಿಕಾ ಬೆಳವಣಿಗೆಗಾಗಿ ಸರ್ಕಾರವು ಹೊಂದಿರುವ ನೀತಿ.

ಆ) ರಾಜ್ಯದ ಕೈಗಾರಿಕಾ ವಾತಾವರಣ ಹೆಚ್ಚಿನ ಕೈಗಾರಿಕಾ ಬೆಳವಣಿಗೆ ಸೂಕ್ತವಾಗಿದೆಯೇ

ಇ) ರಾಜ್ಯದ ವಿದ್ಯುಚ್ಛಕ್ತಿಯ ಕಠಿಣ ಪರಿಸ್ಥಿತಿ ಕೈಗಾರಿಕಾ ಬೆಳವಣಿಗೆಗೆ ಅಡ್ಡಿಯಾಗಿದೆಯೇ;

ಈ) ಹಾಗಾದರೆ ಸರ್ಕಾರ ಈ ದಿಸೆಯಲ್ಲಿ ಏನೇನು ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕೈಗಾರಿಕಾ ಮಂತ್ರಿಗಳು):—ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ಕೊಡುವುದು ಸರ್ಕಾರದ ನೀತಿಯಾಗಿದೆ.

ಹೌದು.

ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯು ಮುಂದಿನ ೨ ವರ್ಷಗಳಲ್ಲಿ ಗಮನಾರ್ಹವಾಗಿ ಅಭಿವೃದ್ಧಿ ಹೊಂದುವ ನಿರೀಕ್ಷೆಯಿದೆ. ಈ ೨ ವರ್ಷಗಳ ನಂತರ ಸ್ಥಾಪಿಸಲ್ಪಡುವ ಕೈಗಾರಿಕಾ ಘಟಕಗಳು ವಿದ್ಯುಚ್ಛಕ್ತಿ ಕೊರತೆಗೆ ಈಡಾಗಲಾರದೆಂಬ ನಿರೀಕ್ಷೆಯಿದೆ. ರಾಜ್ಯದಲ್ಲಿ ಈಗಿನ ವಿದ್ಯುಚ್ಛಕ್ತಿಯ ಪೂರೈಕೆಗನುಗುಣವಾಗಿ ಸರ್ಕಾರವು ವಿದ್ಯುಚ್ಛಕ್ತಿಯನ್ನು ಅವಲಂಬಿಸಿದ ಕೈಗಾರಿಕಾ ಘಟಕಗಳು ಸ್ಥಾಪನೆಗೆ ಪ್ರೋತ್ಸಾಹ ನೀಡಬಾರದೆಂಬ ನೀತಿಯ ಸಂಹಿತೆಯನ್ನು ಕೈಗೊಂಡಿದೆ. ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಹೆಚ್ಚಿನ ಉತ್ಪಾದನೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ

೩೫ ಶ್ರೀ ಗೋವಿಂದ ಪಿ. ಒಡೆಯರಾಜ್.—ಹೊಸ ಸರ್ಕಾರದ ನೀತಿಯ ಪ್ರಕಾರ ಹೆಚ್ಚು ಉದ್ದಿಮೆಗಳನ್ನು ಸ್ಥಾಪನೆ ಮಾಡಬೇಕೆಂದ್ದಿದೀರಿ. ಯಾವ್ಯಾವ ಉದ್ದಿಮೆಗಳನ್ನು ಸ್ಥಾಪನೆ ಮಾಡಬೇಕೆಂದ್ದಿರೀ ಎಂಬುದನ್ನು ದಯವಿಟ್ಟು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಹೆಚ್ಚು ಉದ್ದಿಮೆಗಳನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರ ನೀತಿಯನ್ನು ರೂಢಿಸಿಕೊಂಡಿದೆ. ಈ ಬಗ್ಗೆ ವಿವರಗಳನ್ನು ಸಭೆ ಮುಕ್ತಾಯವಾಗುವುದರೊಳಗೆ ವ್ಯಕ್ತ ಮಾಡುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಗುಲ್ಬರ್ಗಾ ಜಿಲ್ಲೆಯಲ್ಲಿ ೫ ಮಿನಿ ಸಿಮೆಂಟ್ ಫ್ಯಾಕ್ಟರಿಗಳನ್ನು ಮಾಡಲು ಸಾಧ್ಯವಿದೆ ಎಂದು ಸರ್ಕಾರದವರು ಹೇಳಿದ್ದೀರಿ. ಟೆಲಿಪ್ರಿಂಟರ್ಸ್ ಫ್ಯಾಕ್ಟರಿ ಮಾಡಲು ಈಗಾಗಲೇ ೩೮ ಎಕರೆ ಜಮೀನು ವಶಪಡಿಸಿಕೊಳ್ಳಲಾಗಿದೆ. ಅವುಗಳ ಪರಿಸ್ಥಿತಿ ಏನಾಗಿದೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಉದ್ಯೋಗ ಸಿಗತಕ್ಕ ಉದ್ಯಮಗಳನ್ನು ಮಾಡಿ. ಆದರಿಂದ ಕಾರ್ಮಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಉದ್ದಿಮೆಗಳನ್ನು ಮಾಡಲು ಸರ್ಕಾರ ಒಂದು ನೀತಿಯನ್ನು ರೂಪಿಸಿದೆ. ಈ ಒಂದು ದೃಷ್ಟಿಯಲ್ಲಿ ಗುಲ್ಬರ್ಗಾ ಜಿಲ್ಲೆಯಲ್ಲಿ ಸಿಮೆಂಟ್ ಉದ್ಯಮ ಮತ್ತು ಟೆಲಿಪ್ರಿಂಟ್ ಉದ್ಯಮವನ್ನು ಸರ್ಕಾರ ಗಮನದಲ್ಲಿಟ್ಟು ಅವುಗಳಿಗೆ ಪ್ರೋತ್ಸಾಹ ಕೊಡುವ ವಿಚಾರ ಇದೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೈಗಾರಿಕೆಗಳಿಗೆ ಹೆಚ್ಚಿನ ಉತ್ತೇಜನ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಸಿಮೆಂಟ್ ಫ್ಯಾಕ್ಟರಿ ಮಾಡಲು ಅವಕಾಶವಿದೆ. ಆದಕ್ಕೋಸ್ಕರ ಮೈಸೂರು ಮಿನರಲ್ಸ್‌ನವರು ಜಾಗವನ್ನು ರಿಸರ್ವ್ ಮಾಡಿದ್ದಾರೆ. ಉದ್ಯಮವನ್ನು ಮಾಡಲು ೨-೩ ಜನ ಅರ್ಜಿಯನ್ನು ಹಾಕಿದ್ದಾರೆ. ನಿರುದ್ಯೋಗ ಪದವೀಧರರು ಇಂಡಸ್ಟ್ರಿಗಳನ್ನು ಮಾಡಲು ಸರ್ಕಾರ ಹೆಚ್ಚಿನ ಉತ್ತೇಜನ ಕೊಟ್ಟು, ಅವರು ಕೇಳಿದಷ್ಟಕ್ಕ ಜಮೀನಾಂ ವಗೈರೆ ಅನುಕೂಲಗಳನ್ನು ಒದಗಿಸಿ ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಚಿಕ್ಕ ಸಿಮೆಂಟ್ ಉದ್ಯಮಕ್ಕೆ ಅವಕಾಶ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆ. ಉದ್ಯಮ ಮಾಡಲು ಕರ್ನಾಟಕದವರು ಬಂದರೆ ಮೊದಲು ಆದ್ಯತೆ ಕೊಡಲಾಗುತ್ತದೆ. ಆದರಲ್ಲೂ ಪದವೀಧರ ನಿರುದ್ಯೋಗಿಗಳು ಅರ್ಜಿಗಳನ್ನು ಹಾಕಿದ್ದರೆ, ಅದರ ಬಗ್ಗೆ ಸೂಕ್ತ ರೀತಿಯಲ್ಲಿ ನಿರ್ಣಯ ಕೈಗೊಳ್ಳಲಾಗುತ್ತದೆ.

ಶ್ರೀ ಎಂ ಎಸ್. ಕೃಷ್ಣನ್.—ಹಿಂದಿನ ಸರ್ಕಾರ ರಾಜ್ಯದಲ್ಲಿ ಯಾವ್ಯಾವ ಜಿಲ್ಲೆಯಲ್ಲಿ ಯಾವ್ಯಾವ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂಬ ಬಗ್ಗೆ ಒಂದು ಸರ್ವೆ ಮಾಡಿದ್ದರು. ಅದು ನಮಗೆ ಗೊತ್ತಿದೆಯೆ ? ಆ ಒಂದು ಆಧಾರದ ಮೇಲೆ ಸಾರ್ವಜನಿಕ ಕ್ಷೇತ್ರ, ಖಾಸಗಿ ಕ್ಷೇತ್ರಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದಾರೆ. ಇದರ ಬಗ್ಗೆ ತಾವು ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರ ಈ ಬಗ್ಗೆ ಸರ್ವೆ ಮಾಡಿದೆ. ಎಲ್ಲೆಲ್ಲಿ ಯಾವ್ಯಾವ ಉದ್ದಿಮೆಗಳನ್ನು ಸ್ಥಾಪನೆ ಮಾಡಬಹುದೆಂದು ಪರಿಶೀಲನೆ ಮಾಡಲಾಗಿದೆ. ಅಲ್ಲದೆ ಈ ರಾಜ್ಯವನ್ನು ೪ ವಲಯಗಳನ್ನಾಗಿ ವಿಭಾಗ ಮಾಡಲಾಗಿದೆ. ಅದರ ಬಗ್ಗೆ ಸರ್ಕಾರ ಏನೇನು ಸಹಾಯ ಕೊಡಬೇಕೆಂಬುದರ ಬಗ್ಗೆ ಅದನ್ನು ಗಮನದಲ್ಲಿಟ್ಟು ಸೂಕ್ತ ಅಭಿಪ್ರಾಯವನ್ನು ತೆಗೆದುಕೊಂಡು ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡುವ ವಿಚಾರವನ್ನು ಸದನ ಮುಕ್ತಾಯವಾಗುವುದರೊಳಗೆ ನಮ್ಮ ನೀತಿಯನ್ನು ಪ್ರಕಟ ಮಾಡುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಸಣ್ಣ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಈ ಸಣ್ಣ ಕೈಗಾರಿಕೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ಇದುವರೆಗೂ ಕೈಗೊಂಡಿದ್ದಾರೆ ? ಎರಡನೆಯದಾಗಿ ವಿದ್ಯುತ್ ಪೋತಾ ಮಾಡಿರುವುದರಿಂದ ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗಿಲ್ಲವೇ ? ನಮ್ಮ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಪೋತಾದಿಂದ ಸುಮಾರು ೨ ಸಾವಿರ ಕೈಗಾರಿಕೆಗಳಿಗೆ ತೊಂದರೆಯಾಗಿದೆ. ಸುಮಾರು ೩ ಸಾವಿರ ಕೈಗಾರಿಕೆಗಳನ್ನು ಈಗಾಗಲೇ ಮುಚ್ಚಲಾಗಿದೆ. ಇದಕ್ಕೆ ಸರ್ಕಾರದವರು ಯಾವ ಯಾವ ಕ್ರಮಗಳನ್ನು ಕೈಗೊಂಡಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಕ್ಟೋಬರ್ ತಿಂಗಳಲ್ಲಿ ಅಧಿಕಾರಿಗಳು ಹಿಂದಿನ ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಟ್ಟಿದ್ದರು. ಆಗ ಅವರು ಸೂಕ್ತ ಕ್ರಮ ಕೈಗೊಂಡಿದ್ದರೆ ನಮಗೆ ಈಗ ಈ ಪರಿಸ್ಥಿತಿ ಬರುತ್ತಿರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಮತ್ತೆ ನಮಗೆ ಅಧಿಕಾರಿಗಳು ಒಂದು ಸೂಚನೆಯನ್ನು ಕೊಟ್ಟರು. ಆ ಸೂಚನೆಯನ್ನು ನಾವು ಗಮನದಲ್ಲಿಟ್ಟುಕೊಂಡು ಈ ಕೆಲಸವನ್ನು ಮಾಡಿದ್ದೇವೆ. ಹಿಂದಿನ ಸರ್ಕಾರದವರಿಂದ ತಿಳಿದುಕೊಂಡಿದ್ದರು ಕೇರಳ ರಾಜ್ಯದಿಂದ ನಮಗೆ

ವಿದ್ಯುಚ್ಛಕ್ತಿ ಬರುತ್ತದೆ ಎಂದು. ಆದರೆ ಕೇರಳ ರಾಜ್ಯದಿಂದ ವಿದ್ಯುಚ್ಛಕ್ತಿ ಬರಲಿಲ್ಲ. ಇದರಿಂದ ಈಗ ನಮಗೆ ಬಹಳ ಅನ್ಯಾಯವಾಗಿದೆ. ಇನ್ನು ಎರಡು ವರ್ಷಗಳಲ್ಲಿ ರಾಯಚೂರಿನ ಥರ್ಮಲ್ ಪ್ಲಾಂಟಿನ ಕೆಲಸವನ್ನು ಪೂರೈಸಿ ೧೯೮೪-೮೫ನೇ ಇಸವಿಯೊಳಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ಯೋಚನೆ ಮಾಡಿದ್ದೇವೆ. ಇದರ ಜೊತೆಗೆ ಇನ್ನೂ ಅನೇಕ ಯೋಜನೆಗಳನ್ನು ರೂಪಿಸಿದ್ದೇವೆ. ಮಿನಿ ಕೈಗಾರಿಕೆಗಳು ಹಾಗೂ ಬೇರೆ ಬೇರೆ ರೀತಿಯ ವಿಚಾರಗಳು ಸರ್ಕಾರದ ಮುಂದೆ ಇವೆ. ಈ ಎಲ್ಲಾ ವಿಚಾರಗಳನ್ನು ಆಲೋಚನೆ ಮಾಡಿ ಶೀಘ್ರವಾಗಿ ಒಂದು ನಿಲುವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸುಮಾರು ೩ ಸಾವಿರ ಕೈಗಾರಿಕೆಗಳನ್ನು ಮುಚ್ಚಲಾಗಿದೆ. ಇದರ ಜೊತೆಗೆ ಇನ್ನು ಸುಮಾರು ೧೬ ಸಾವಿರ ಕೈಗಾರಿಕೆಗಳು ಮುಚ್ಚುವ ಪರಿಸ್ಥಿತಿಯಲ್ಲಿ ಇವೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡು ಈಗ ಆಗುತ್ತಿರುವ ತೊಂದರೆಯನ್ನು ತಪ್ಪಿಸುತ್ತಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಬೇಗ ಕ್ರಮ ಕೈಗೊಳ್ಳುತ್ತೇವೆ.

ವಿಷಯ.—ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನಲ್ಲಿ ಹಳ್ಳಿಗಳಿಗೆ ಉತ್ತಮವಾದ ಸಂಪರ್ಕ ರಸ್ತೆಗಳಿಲ್ಲದಿರುವ ಬಗ್ಗೆ.

೩೬ ಶ್ರೀ ದೇವೇಂದ್ರಪ್ಪ ಘಾಳಪ್ಪ (ಚಿಂಚೋಳಿ).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಗುಲ್ಬರ್ಗಾ ಜಿಲ್ಲಾ ಚಿಂಚೋಳಿ ತಾಲ್ಲೂಕಿನಲ್ಲಿ ಎಷ್ಟು ಹಳ್ಳಿಗಳಿಗೆ ಉತ್ತಮವಾದ ಸಂಪರ್ಕ ರಸ್ತೆಗಳು ಇಲ್ಲ (ದಯವಿಟ್ಟು ಹಳ್ಳಿವಾರು ವಿವರಗಳನ್ನು ಕೊಡುವುದು).

(ಆ) ೧೯೮೩ನೇ ಸಾಲಿನಲ್ಲಿ ಎಲ್ಲೆಲ್ಲಿ ಅವಶ್ಯಕವೋ ಅಲ್ಲಲ್ಲಿ ಸಂಪರ್ಕ ರಸ್ತೆಗಳನ್ನು ಮಾಡುವುದಕ್ಕೂ ಮತ್ತು ಕೆಟ್ಟುಹೋದ ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೂ ಸಂಬಂಧಪಟ್ಟ ಇಲಾಖೆಗೆ ಸರ್ಕಾರ ಆದೇಶ ನೀಡುವುದೇ ?

* ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ೭೭ (ಹಳ್ಳಿವಾರು) ವಿವರಗಳನು ಜೊತೆಪತ್ರ ಎ ನಲ್ಲಿ ಕೊಟ್ಟಿದೆ.

(ಆ) ಇದನ್ನು ಹಣಕಾಸಿನ ಪರಿಸ್ಥಿತಿಗೆ ಅನುಗುಣವಾಗಿ ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

---

* ಮಾನ್ಯ ಸದಸ್ಯರು ಹಾಜರಿರಲಿಲ್ಲ.